# ಗೋ ವಿಶ್ವ

Cow Universe

गौ विश्व

ಸರ್ವಧಾರಿ ಸಂವತ್ಸರ | ಭಾದ್ರಪದ | ಸಪ್ಟೆಂಬರ್ ೨೦೦೮ | ಸಂಪುಟ–೨ | ಸಂಚಿಕೆ–೯


ಗುರುವಾಣಿ

## ಗವ್ಯೋದ್ಯಮದ ಮಾತರಳಿ ಕೃತಿಯಾಗಿದೆ



ಮಾತು ಕೃತಿಯಾದರೆ ಆ ಮಾತಿಗೊಂದು ನೆಲೆ, ಬೆಲೆ. ನಮ್ಮ ಮಾತು ಕೃತಿಯಾಗಿ ಅರಳುತ್ತಿದೆ ಎಂದು ಹೇಳಲು ಬಹಳ ಸಂತೋಷವಾಗುತ್ತಿದೆ. ಕಾಮದುಘಾ ಯೋಜನೆ ಪ್ರಾರಂಭವಾದಂದಿನಿಂದ ಗೋ ಸಂರಕ್ಷಣೆ ಸ್ವಯಂ ಪ್ರೇರಣೆಯಿಂದ ಆಗಬೇಕಾದರೆ ಆ ಕಾರ್ಯ Economically Viable ಆಗಬೇಕು ಎಂದು ಬಲವಾಗಿ ಪ್ರತಿಪಾದಿಸಿದ್ದೆವು. ಹಾಗಾದಾಗ ಮಾತ್ರ ಅದು ಭಾವನಾತ್ಮಕವಾಗಿ ಮಾತ್ರವಲ್ಲದೇ ವಾಸ್ತವಿಕವಾಗಿಯೂ ಪ್ರಸ್ತುತ ಎಂದೆನಿಸುತ್ತದೆ.

ಆ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯಾಗಿ ಭಾವಜಾಗರಣಕ್ಕೆ ಒತ್ತು ನೀಡಿದೆವು. ಹಾಗೆ ಗೋ ಯಾತ್ರೆಗಳು, ವಿಶ್ವ ಗೋ ಸಮ್ಮೇಳನ, ಕೋಟಿ ನೀರಾಜನ ಭರತಭೂಮಿಯ ಈ ಪಾವನ ಮಣ್ಣಿನಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡವು. ಹಾಗೆಲ್ಲ ಆದಾಗ ಒಂದು ಮಾತನ್ನು ಮತ್ತೆ ಮತ್ತೆ ನೆನಪಿಸಿಕೊಂಡಿದ್ದೆವು "ಬೃಹತ್ ಜಾಗೃತಿ ಸಮಾವೇಶಗಳೆಲ್ಲ ಮಳೆಯಿದ್ದಂತೆ. ಅದು ಹಾಗೆಯೇ ಮಳೆಯ ಪ್ರವಾಹವಾಗಿ ಕೊಚ್ಚಿ ಹೋಗಬಾರದು. ವರ್ಷಪೂರ್ತಿ ಹೊಳೆಯಾಗಿ ಹರಿಯಬೇಕು. ಹಾಗೆ ಆಗಬೇಕಾದರೆ ಗೋ ಸಂರಕ್ಷಣೆ ಎಂಬುದು ಹೋರಾಟದಲ್ಲಿಯೇ ಪರ್ಯವಸಾನ ಹೊಂದಬಾರದು. ಅದಕ್ಕಾಗಿ, ರಚನಾತ್ಮಕ ಕಾರ್ಯಕಲಾಪಗಳನ್ನು ಹಮ್ಮಿಕೊಳ್ಳಲೇಬೇಕು. ಆಗ ಮಾತ್ರ ಇಂತಹ ಕಾರ್ಯಕ್ರಮಗಳಿಗೆಲ್ಲ ಒಂದು ತೂಕ. ಹಾಗಿಲ್ಲದಿದ್ದರೆ ಇವುಗಳಿಗೆಲ್ಲ ಕವಡೆ ಕಾಸಿನ ಕಿಮ್ಮತ್ತೂ ಇಲ್ಲ. ಹತ್ತರೊಟ್ಟಿಗೆ ಹನ್ನೊಂದು ಅಷ್ಟೆ".

ಅದೇ ಸ್ಫೂರ್ತಿ, ಉಲ್ಲಾಸಗಳೊಂದಿಗೆ ಧಾರವಾಡ ಜಿಲ್ಲೆಯನ್ನು ದೇಶದ ಪ್ರಥಮ 'ಗೋ ಅಭಯ ಜಿಲ್ಲೆ'ಯನ್ನಾಗಿ ಮಾಡಲು ಸಂಕಲ್ಪ ತೊಟ್ಟ ನೆನಪು ಇನ್ನೂ ಹಸಿಹಸಿಯಾಗಿಯೇ ಇದೆ. ಅಷ್ಟರಲ್ಲಾಗಲೇ ಅಲ್ಲಿ 'ಗವ್ಯೋದ್ಯಮ'ದ ಚಿಗುರೊಡೆಯುತ್ತಿದೆ. ಒಡೆದ ಚಿಗುರು ಭಾರೀ ಪ್ರಮಾಣದ ನಿರೀಕ್ಷೆಗಳನ್ನು ಸಾಕಾರಗೊಳಿಸುವ ಲಕ್ಷಣಗಳನ್ನು ಬಿಂಬಿಸುತ್ತಿದೆ.

ಅದನ್ನು ಪೂರ್ತಿಯಾಗಿ ಹೇಳಿಬಿಡುತ್ತೇವೆ. ಕೆಲವಾರು ದಿನಗಳ ಹಿಂದೆ ಗೋಕರ್ಣದಲ್ಲಿ 'ಶ್ರೀಕ್ಷೇತ್ರ ಗೋಕರ್ಣ ಪುನರುತ್ಥಾನ ಮಹಾಸಂಕಲ್ಪ ಸಭೆ' ಜರುಗಿದ್ದು ನಿಮಗೆಲ್ಲ ಗೊತ್ತೇ ಇದೆ. ಅದರ ಯಶಸ್ಸು ವರ್ಣಿಸಲಸದಳ. ನಿಮ್ಮೆಲ್ಲರ ಗಮನಕ್ಕೆ ಬಂದಿತ್ತೋ, ಇಲ್ಲವೋ ತಿಳಿಯಲಿಲ್ಲ. ಅದರ ಮಧ್ಯದಲ್ಲಿ ಮತ್ತೊಂದು ಮಹತ್ವದ ಮೈಲುಗಲ್ಲನ್ನು ಕ್ರಮಿಸಿದೆವು. ಅದು 'ಗೋಗಂಗಾ ಫ್ಲೋರ್‌ಕ್ಲೀನರ್'ನ ಲೋಕಾರ್ಪಣೆ. ಇದು (ದೇಶೀ ಹಸುಗಳ) ಗೋಮೂತ್ರಾಧಾರಿತ ಫ್ಲೋರ್‌ಕ್ಲೀನರ್. ಮಾರುಕಟ್ಟೆಯಲ್ಲಿ ಈಗ ಸಿಗುವ ಫ್ಲೋರ್‌ಕ್ಲೀನರ್‌ಗಳ ಅರ್ಧದಷ್ಟು ಬೆಲೆ ಹೊಂದಿರುವ ಇದರ ಪರಿಣಾಮ ದುಪ್ಪಟ್ಟು ಎಂಬುದು ಸಾಬೀತಾದ ಸಂಗತಿ.

### ಹೂರಣ


ಗುರುವಾಣಿ

ಪ್ರಶ್ನೋತ್ತರ

ಚೀನಾದಲ್ಲಿ ವಿಷದ ಹಾಲಿನ ಹೊಳೆ

ಮಾಸದ ಗೋವು: ಖಿಲಾರಿ

ಮುರಿಯುತ್ತಿರುವ ದೇಶದ ಬೆನ್ನೆಲುಬು – ಸಾವಯುವ ಕೃಷಿಯೊಂದೇ ಪರಿಹಾರ

ಗೋವು ಮತ್ತು ಕೃಷಿ

ಸಂಪಾದಕೀಯ



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




ಚಿತ್ರದಲ್ಲಿ ಶ್ರೀ ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮೀಜಿ, ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ, ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು, ಶ್ರೀ ಶ್ರೀ ಸಿದ್ಧಲಿಂಗೇಶ್ವರ ಮಹಾಸ್ವಾಮೀಜಿ ಇದ್ದಾರೆ.



ಇದು ಧಾರವಾಡ ಜಿಲ್ಲೆಯ, ಅಷ್ಟೇ ಏಕೆ ರಾಜ್ಯದ ಗೋಪಾಲಕರ ಭಾಗ್ಯದ ಬಾಗಿಲನ್ನು ತೆರೆಯುವಲ್ಲಿ ಸಂಶಯವೇ ಇಲ್ಲ. ಇದನ್ನು ತಯಾರಿಸಲು ಮುಂದೆ ಬಂದಿರುವ ಹುಬ್ಬಳ್ಳಿಯ ವಿಭವಾ ಕೆಮಿಕಲ್ಸ್‌ನವರು ಹೇಳುತ್ತಾರೆ "ಗೋಗಂಗಾ ಫ್ಲೋರ್‌ಕ್ಲೀನರ್‌ಗೆ ಪ್ರಸ್ತುತ ೫೦% ಗೋಮೂತ್ರ ಸೇರಿಸಲಾಗುತ್ತದೆ. ಬರುವ ದಿನಗಳಲ್ಲಿ ೮೦%ಗೆ ಏರಿಸುವ ನಿಟ್ಟಿನಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಪ್ರಾರಂಭದಲ್ಲಿ ದಿನವೊಂದಕ್ಕೆ ೨೦೦೦ ಲೀ. ಗೋಮೂತ್ರ ಖರೀದಿಸಿ, ಹಂತಹಂತವಾಗಿ ೧,೦೦,೦೦೦ ಲೀ.ಗೂ ಅಧಿಕ (ದಿನವೊಂದಕ್ಕೆ) ಗೋಮೂತ್ರ ಖರೀದಿಸುವ ನಿಟ್ಟಿನಲ್ಲಿ ಯೋಜನೆಗಳು ರೂಪುಗೊಳ್ಳುತ್ತಿವೆ. ಇದು ಪೆಪ್ಸಿ, ಕೋಕ್‌ನಂತೆ ಅಲ್ಲ. ಅಪ್ಪಿತಪ್ಪಿ ಸೇವಿಸಿದರೂ ಏನೂ ತೊಂದರೆ ಉಂಟುಮಾಡುವುದಿಲ್ಲ". ಹೀಗೆ ಕೊನೆಯಿಲ್ಲದಂತೆ ಗೋಮೂತ್ರ ಗುಣಗಾನದ ಪಟ್ಟಿ ಬೆಳೆಯುತ್ತದೆ.

ಇದು ಕೇವಲ ಗೋಮೂತ್ರದಿಂದ ತಯಾರಿಸುವ ಒಂದು ಫ್ಲೋರ್‌ಕ್ಲೀನರ್‌ನ ವಿಷಯ. ಗೋಮೂತ್ರದಿಂದಲೇ ತಯಾರಿಸಬಹುದಾದ ಸೋಪು, ಶ್ಯಾಂಪೂ, ಬಾಡಿ ಲೋಶನ್, ಆಫ್ಟರ್ ಶೇವಿಂಗ್ ಲೋಶನ್, ದಂತಮಂಜನ, ಮುಲಾಮುಗಳು, ತೈಲಗಳು, ಗೋಮೂತ್ರ ಅರ್ಕಗಳನ್ನು; ಗೋಮಯದ ಉತ್ಪನ್ನಗಳನ್ನು; ಹಾಲು, ತುಪ್ಪ ಮೊದಲಾದವುಗಳ ಔಷಧೋತ್ಪನ್ನಗಳನ್ನು; ಗೋಬರ್‌ಗ್ಯಾಸ್, ವಿದ್ಯುಚ್ಛಕ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುವ ಯೋಜನೆ ಹಾಕಿಕೊಳ್ಳಲು ಬಾಕಿ ಇರುವಂತೆಯೇ ಇಷ್ಟೊಂದು ಭರವಸೆಯನ್ನು ಮೂಡಿಸಿದೆ.

ಈ ಭರವಸೆಯ ಹುರುಪಿನಿಂದ ಧಾರವಾಡ ಜಿಲ್ಲೆಯಾದ್ಯಂತ ಗೋ ಪರಿವಾರದ ಸಂಘಟನೆ ಭರದಿಂದ ಸಾಗಿದೆ. ಅವರಿವರೆನ್ನದೇ ಸಮಾಜದ ಪ್ರತಿಯೊಬ್ಬರನ್ನೂ ಏಕ ಸೂತ್ರದ ಅಡಿಯಲ್ಲಿ ಸಂಘಟಿಸುವ ಘಟನೆ ನಡೆಯುತ್ತಿದೆ. ಜೊತೆಗೆ ದೇಶೀ ಹಸುಗಳ ಗಣತಿ ಕಾರ್ಯ ಪ್ರಗತಿಯಲ್ಲಿದೆ.

ಸಾವಿರ-ಸಾವಿರ ವರುಷಗಳ ಕಾಲ ಬಾಳುವ ಇಂತಹ ಘಟನೆಗಳಲ್ಲಿ ಒಂದಾಗಿ, ಅದಕ್ಕೆ ಸಾಕ್ಷಿಯಾಗುವುದು ಭಗವತ್ಪ್ರೀತಿಕರವಾದುದು. ನೀವೆಲ್ಲರೂ ಈ ಸತ್ಕಾರ್ಯದಲ್ಲಿ ತೊಡಗಿಕೊಳ್ಳಿ.

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

**ಶ್ರೀ ರಾಮಚಂದ್ರಾಪುರ ಮಠ**

## ಪ್ರಶ್ನೋತ್ತರ

ಪ್ರ: ಅಮೃತಮಹಲ್ ತಳಿಯ ವಿಶೇಷತೆಗಳೇನು?

ಉ: ಸುಮಾರು ವರ್ಷಗಳ ದೀರ್ಘ ಇತಿಹಾಸವಿರುವ ಅಮೃತಮಹಲ್ ತಳಿಯು ಕರ್ನಾಟಕಕ್ಕೆ ವಿಶಿಷ್ಟವಾದುದು. ದೃಢವಾದ ಮೈಕಟ್ಟು, ಉದ್ದವಾಗಿ ಹಿಂದಕ್ಕೆ ಬಾಗಿದ ಕೋಡುಗಳು ನೀಳವಾದ ಹಾಗೂ ನಡುವಿನಲ್ಲಿ ಆಳವಾಗಿರುವ ಮುಖ ಈ ತಳಿಯ ಲಕ್ಷಣಗಳು. ಸಾಮಾನ್ಯವಾಗಿ ಬೂದು, ಬಿಳಿ ಮತ್ತು ಕಪ್ಪು ಬಣ್ಣ ಹೊಂದಿರುತ್ತವೆ. ೧೬ ನೇ ಶತಮಾನದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರ ಅರಸರ ರಾಯಭಾರಿಯು ಈ ತಳಿಯನ್ನು ಅಬಿವೃದ್ಧಿಪಡಿಸಿದನು. ನಂತರ ಮೈಸೂರು ಅರಸರು ಮುಖ್ಯವಾಗಿ ಚಾಮರಾಜ ಒಡೆಯರು (೧೬೧೭ - ೧೬೫೯) ಕಂಠೀರವ ನರಸರಾಜ ಒಡೆಯರು, ಚಿಕ್ಕದೇವರಾಜ ಒಡೆಯರು, ನವಾಬ್ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಅಮೃತಮಹಲ್ ತಳಿಯನ್ನು ವಿಶೇಷವಾಗಿ ಬೆಳೆಸಿದರು.

ಪ್ರ: ಸ್ವಾತಂತ್ರ್ಯ ಶಿಲ್ಪಿಗಳು ಗೋಸಂರಕ್ಷಣೆಯ ಬಗ್ಗೆ ಏನು ಹೇಳಿದರು?

ಉ: ಲೋಕಮಾನ್ಯ ಬಾಲಗಂಗಾಧರ ತಿಲಕರು ಹೇಳಿದ್ದು –"ಸ್ವರಾಜ್ಯ ಗಳಿಸಿದ ಐದೇ ನಿಮಿಷಗಳಲ್ಲಿ ಲೇಖನಿಯ ಒಂದೇ ಗೆರೆಯಿಂದ ಗೋಹತ್ಯಾ ನಿಷೇಧದ ಕಾನೂನನ್ನು ಸಾರುತ್ತೇವೆ". ಭಾರತದ ಮೊದಲ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಹೇಳಿದ್ದು – "ಹಿಂದೂಸ್ಥಾನದಲ್ಲಿನ ಜನರು ಗೋಹತ್ಯೆಯನ್ನು ಸಹಿಸಲಾರರು. ಬೀಳು ದನಗಳನ್ನು ಕೊಲ್ಲಬಹುದೆಂದು ದುಸ್ಸಾಹಸದ ಸಲಹೆಯನ್ನು ಕೆಲವರು ಕೊಡುತ್ತಾರೆ. ಇದರಲ್ಲಿ ಸಾಹಸವಿರಬಹುದು. ಆದರೆ ಬುದ್ಧಿ ಮಾತ್ರ ಇಲ್ಲ. ಇದರಿಂದ ಭಾರೀ ಕ್ರಾಂತಿಯನ್ನೆಬ್ಬಿಸಿದಂತಾದೀತು".

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಚೀನಾದಲ್ಲಿ ವಿಷದ ಹಾಲಿನ ಹೊಳೆ

ಚೀನಾದಲ್ಲಿ ಈಗ ಅಕ್ಷರಶಃ ಹಾಲಿನ ಹೊಳೆ ಹರಿಯುತ್ತಿದೆ. ಆದರೆ ಶುದ್ಧ ಹಾಲಲ್ಲ; ವಿಷಪೂರಿತ ಹಾಲಿನ ಪುಡಿಯಿಂದಾಗಿ ರಾಷ್ಟ್ರದ ನಾನಾ ಕಡೆ ಅರ್ಧ ಲಕ್ಷಕ್ಕೂ ಹೆಚ್ಚು ಮಕ್ಕಳು ಕಾಯಿಲೆ ಬಿದ್ದು ಕೆಲವು ಮಕ್ಕಳು ಅಸು ನೀಗಿದ್ದರಿಂದ ಎಲ್ಲೆಡೆ ಹಾಲನ್ನು, ಹಾಲಿನ ಪುಡಿಯನ್ನು, ಜತೆಗೆ ಮೊಸರು, ಗಿಣ್ಣ, ತುಪ್ಪ, ಬೆಣ್ಣೆ, ಬೇಕರಿ ತಿನಿಸು, ಚಾಕೊಲೇಟ್ ಎಲ್ಲವನ್ನೂ ತಿಪ್ಪೆಗೆ ಸುರಿಯಲಾಗುತ್ತಿದೆ. ಅಕ್ಕಪಕ್ಕದ ತೈವಾನ್, ಹಾಂಗ್‌ಕಾಂಗ್‌ಗಳಿಗೆ ಪೂರೈಕೆ ಆಗುತ್ತಿದ್ದ ಹೈನುದ್ರವ್ಯಗಳನ್ನು ಹಿಂಪಡೆಯಲಾಗುತ್ತಿದೆ.

ಇದಕ್ಕೆಲ್ಲ ಕಾರಣ ಏನೆಂದರೆ ಡೇರಿಗೆ ಪೂರೈಸುವ ಹಾಲಿಗೆ ಕೆಲವರು ಮೆಲಮೈನ್ ಎಂಬ ಕಲಬೆರಕೆ ವಸ್ತುವನ್ನು ಸೇರಿಸುತ್ತಿದ್ದರು. ನಮ್ಮಲ್ಲೂ ಹಾಲನ್ನು ದಪ್ಪ ಮಾಡಲೆಂದು ಕೆಲವರು ಯೂರಿಯಾ ಸೇರಿಸುತ್ತಾರೆ. ಮೆಲಮೈನ್ ಕೂಡ ಬಹುಮಟ್ಟಿಗೆ ಯೂರಿಯಾದ್ದೇ ತದ್ರೂಪಿ. ಅಂಥ ಬೆರಕೆಹಾಲನ್ನು ಕಾಯಿಸಿದಾಗ ಸಾರಜನಕ ಬಿಡುಗಡೆಯಾಗಿ ವಿಷವಾಗುತ್ತದೆ. ಮೆಲಮೈನ್ ಸಾವಯವ ಸಂಯುಕ್ತ ಆಗಿದ್ದು, ಬೆಂಕಿ ಆರಿಸುವ ನೊರೆಯಾಗಿ ಅದನ್ನು ಬಳಸುತ್ತಾರೆ. ಯೂರಿಯಾ ಮತ್ತು ಫರ್ಮಾಲ್ಡಿಹೈಡ್ ಸೇರಿಸಿದಾಗ 'ಮೆಲಮೈನ್ ರಾಳ' ಸಿದ್ಧವಾಗುತ್ತದೆ. ಅದು ಬಿಸಿಯಿದ್ದಾಗ ಮೆತ್ತಗಿದ್ದು, ನಂತರ ಗಟ್ಟಿ ಹೊಳಪಿನ ಪಿಂಗಾಣಿಯಂಥ ಪ್ಲಾಸ್ಟಿಕ್ ಆಗುತ್ತದೆ. ಇದರಿಂದ ಕಪ್ಪು–ಬಸಿ, ಪ್ಲೇಟು, ಸೌಟು, ಕುರ್ಚಿ–ಮೇಜು, ಕಾರಿನ ಬಾಡಿ, ಗೋಡೆಗೆ ಅಂಟಿಸುವ ಹೆಂಚಿನಂಥ ಸಾವಿರಾರು ಸಾಮಗ್ರಿಯನ್ನು ತಯಾರಿಸುತ್ತಾರೆ.

ಕಳೆದ ವರ್ಷ ಅಮೆರಿಕದಲ್ಲಿ ಮೆಲಮೈನ್ ಭಾರೀ ರಾದ್ಧಾಂತ ಎಬ್ಬಿಸಿತ್ತು. ಸಾಕಿದ ನಾಯಿ ಹಾಗೂ ಬೆಕ್ಕುಗಳು ಕಿಡ್ನಿ ವೈಫಲ್ಯದಿಂದಾಗಿ ಸಾಯತೊಡಗಿದ್ದವು. ಅವುಗಳ ಊಟದ ಬಟ್ಟಲೇ ಈ ಮೆಲಮೈನ್ ವಿಷಕ್ಕೆ ಕಾರಣವೆಂದು ಗುಲ್ಲೆದ್ದಿದ್ದರಿಂದ ರಾತ್ರೋರಾತ್ರಿ ಅಂಗಡಿಗಳಿಂದ ಅಂಥ ಪಾತ್ರೆಗಳೆಲ್ಲ ಮಾಯವಾದವು. ಬಿಸಿ ದ್ರವದಲ್ಲಿ ಮೆಲಮೈನ್ ಪಾತ್ರೆಗಳು ಅತ್ಯಲ್ಪ ಪ್ರಮಾಣದಲ್ಲಿ ವಿಷ ಹೊಮ್ಮಿಸುತ್ತದೆ, ಮೂತ್ರಪಿಂಡಕ್ಕೆ ಧಕ್ಕೆ ಬರುತ್ತದೆ ಎಂದು ಕೆಲವು ವಿಜ್ಞಾನಿಗಳು ಘೋಷಿಸಿದರು. ಆದರೆ ನಿಜವಾದ ಖಳನಾಯಕ ಹೊರಗಿನಿಂದ ಬಂದಿದ್ದ! ವಿಷ ಹೊಮ್ಮುವುದು ಪಾತ್ರೆಯಿಂದಲ್ಲ, ಮುದ್ದುಪ್ರಾಣಿಗಳಿಗೆ ತಿನ್ನಿಸುವ ಆಹಾರದಿಂದ ಎಂಬುದು ಖಾತ್ರಿಯಾಯಿತು. ಪಶು ಆಹಾರಕ್ಕೆ ಸೇರಿಸುವ ಪ್ರೋಟೀನು ಚೀನಾದಿಂದ ಬಂತೆಂಬುದು ಪತ್ತೆಯಾಗಿ, ಅದು ಹಾಲಿನ ಪ್ರೊಟೀನು ಅಲ್ಲವೆಂದು ಗೊತ್ತಾಗಿ, ಅವಕ್ಕೆಲ್ಲ ನಿಷೇಧ ಹಾಕಲಾಯಿತು.

ಈಗ ನೋಡಿದರೆ ಚೀನಾದ ಮುಗ್ಧ ಮಕ್ಕಳಿಗೇ ಮೂತ್ರಪಿಂಡದಲ್ಲಿ ಕಲ್ಲು ಕಾಣಿಸುತ್ತಿದೆ. ಹಾಲಿಗೆ ಸೇರಿಸುವ ಮೆಲಮೈನ್ ನಕಲಿ ಪ್ರೋಟೀನೇ ಅದಕ್ಕೆ ಕಾರಣ ಎಂಬುದು ಗೊತ್ತಾಗಿದೆ. ಆಹಾರ ಗುಣಮಟ್ಟ ನಿಯಂತ್ರಕರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಕಲಬೆರಕೆ ಖದೀಮರು ಸಿಕ್ಕಿಬಿದ್ದಿದ್ದಾರೆ. 'ಅವರಿಗೆ ಮರಣ ದಂಡನೆ ಖಚಿತ' ಎಂದು ಅಲ್ಲಿನ ಸರಕಾರಿ ಪತ್ರಿಕೆ 'ಚೈನಾ ಡೇಲಿ' ಬರೆದಿದೆ.

ಸರಕಾರ ನಿರ್ದಯ ಕ್ರಮ ಕೈಗೊಂಡಿದೆ. ಕಳೆದ ವರ್ಷ ಆಹಾರ ಮತ್ತು ಔಷಧ ನಿಗಮದ ಮುಖ್ಯಸ್ಥನನ್ನು ಅದು ಗಲ್ಲಿಗೆ ಹಾಕಿತ್ತು. ಕಳೆದ ವಾರ ಶಿಜಿಯಾಶ್ವಾಂಗ್ ಪಟ್ಟಣದ ಮೇಯರನ್ನು ಕೆಳಕ್ಕಿಳಿಸಿದೆ. ಹಾಲಿನ ಪುಡಿಯ ೨೨ ಬ್ರಾಂಡ್‌ಗಳಿಗೆ ಮುಟ್ಟುಗೋಲು ಹಾಕಿದೆ. ಆದರೂ ಜನರ ಕಂಗಾಲಿಗೆ ಸಮಾಧಾನ ಸಿಕ್ಕಿಲ್ಲ. ಒಂಟಿ ಮಗುವಿನ ಪಾಲಕರೇ ಜಾಸ್ತಿ ಇರುವುದರಿಂದ ಅವರೆಲ್ಲ ಆಸ್ಪತ್ರೆಗೆ ನುಗ್ಗುತ್ತಿದ್ದಾರೆ. ಯಾವ 'ಸುರಕ್ಷಿತ' ಬ್ರಾಂಡ್‌ಗೂ ಬೇಡಿಕೆ ಇಲ್ಲ. ಮಕ್ಕಳಿಗೆ ಬರೀ ಗಂಜಿ ಕುಡಿಸುವವರ ಸಂಖ್ಯೆ ಹೆಚ್ಚಿದೆ. ಡೈರಿ ಉದ್ಯಮವೇ ನೆಲಕಚ್ಚುವ ಸ್ಥಿತಿಗೆ ಬಂದಿದ್ದರಿಂದ ಅದನ್ನೇ ನಂಬಿದ್ದವರಿಗೆ ಗಂಜಿಯೂ ಕಷ್ಟವಾಗಿದೆ.

ಜಾಗತೀಕರಣದ ವಿಕಾರ ಮುಖ ಇದು. ಬಹುರಾಷ್ಟ್ರೀಯ ಕಂಪನಿಗಳು ಇಡೀ ಜಗತ್ತಿಗೆ ತಮ್ಮ ಜಾಲ ಬೀಸಿ ಎಲ್ಲರನ್ನೂ ಮಾರುಕಟ್ಟೆಗೆ ಸೆಳೆಯಲೆಂದು ಜಾಹೀರಾತುಗಳ ಮೂಲಕ ಮೋಹಕ ಬಲೆಯನ್ನೂ ಹೆಣೆಯುತ್ತವೆ. ಈ ಜಾಲದಲ್ಲಿ ಎಲ್ಲೇ ದೋಷ ಕಂಡರೂ ಮಾಧ್ಯಮಗಳ ತಮ್ಮಟೆಯಿಂದಾಗಿ ಇಡೀ ಜಗತ್ತು ತಲ್ಲಣಿಸುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ತಮ್ಮ ಮಗುವಿಗೆ ತಮ್ಮ ಹಸುವಿನದೇ ಹಾಲು ಕುಡಿಸುತ್ತಿದ್ದವರು ಇಂದು ಸಾಲ ಮಾಡಿ ಹಸು ತಂದು, ಹಾಲನ್ನು ಡೈರಿಗೆ ಹಾಕಿ, ತಮ್ಮ ಮಗುವಿಗೆ ಬೇಬಿ ಫುಡ್ಡನ್ನು ತರುತ್ತಾರೆ. ಏಕೆಂದರೆ ಮಾಧ್ಯಮಗಳು ಗುಂಡುಗುಂಡು ಮುದ್ದು ಮಕ್ಕಳನ್ನು ತೋರಿಸಿ ಪುಡಿಫುಡ್ಡನ್ನು ಹಾಡಿ ಹೊಗಳುತ್ತವೆ. ಹಿಂದೆಲ್ಲ ಹಸುವಿನ ಹಾಲು ಎಂದರೆ ಪ್ರೋಟೀನು, ಕ್ಯಾಲ್ಸಿಯಂ ಎಂದಿಷ್ಟೇ ಗೊತ್ತಿತ್ತು. ಇಂದು ಡಬ್ಬಿಯ ಪುಡಿಯಲ್ಲಿ ನಾನಾ ಕನಸುಗಳಿವೆ. ಮಗು ಎತ್ತರ ಬೆಳೆಯಲಿಕ್ಕೆ ಎಚ್‌ಜಿಎಚ್ ಹಾರ್ಮೋನು, ಸ್ಮರಣಶಕ್ತಿ ಮತ್ತು ಸ್ನಾಯುವೃದ್ಧಿಗೆ ಇದೂಅದೂ, ಮೈಕಾಂತಿ ಹೆಚ್ಚಲಿಕ್ಕೆ ಅದೂಇದೂ ಸೇರ್ಪಡೆ ಆಗಿವೆ. ಕೆಲವು ಹೆಚ್ಚುವರಿ ಗುಣಗಳನ್ನು ಹಾಲಿಗೆ ಸೇರಿಸಿದರೆ ಇನ್ನು ಕೆಲವನ್ನು ಹಸುವಿಗೆ, ಮತ್ತೆ ಕೆಲವನ್ನು ಪಶು ಆಹಾರಕ್ಕೆ ಸೇರಿಸಿರುತ್ತಾರೆ. ಅಂತೂ ಮಗುವಿಗೆ ಅಮೃತವನ್ನೇ ಕೊಟ್ಟೆನೆಂಬ ಭ್ರಮೆ ತಾಯಂದಿರಲ್ಲಿ ಮೂಡುತ್ತದೆ. ಕೃತಕ ಹಾರ್ಮೋನ್ ಪ್ರಭಾವದಿಂದ ಮೆಕ್ಸಿಕೊದಲ್ಲಿ ಪುಟ್ಟ ಮಗುವೂ ಮುಟ್ಟಾಗಿದ್ದು, ಮೀಸೆ ಗಡ್ಡ ಮೊಳೆತಿದ್ದು ಹಿಂದೆ ವರದಿಯಾಗಿತ್ತು. ಚೀನಾದಲ್ಲಿ ಎಳೆಮಕ್ಕಳಲ್ಲಿ ಬೊಜ್ಜು ಒಂದು ಸಾಂಕ್ರಾಮಿಕ ಕಾಯಿಲೆ ಎಂಬಂತೆ ವ್ಯಾಪಿಸಿದೆ.

(ಕೃಪೆ: ಪ್ರಜಾವಾಣಿ)

**– ನಾಗೇಶ ಹೆಗಡೆ**



ಮೂತ್ರಪಿಂಡದ ಕಲ್ಲಿನ ತೊಂದರೆಯಿಂದ ನರಳುತ್ತಿರುವ ಮಗು

## ಮಾಸದ ಗೋವು

# ಖಿಲಾರಿ

ಈ ಬಾರಿಯ ಮಾಸದ ಗೋವು ಶುದ್ಧ ಕೆಲಸಗಾರ ತಳಿ ಖಿಲಾರಿ.

'ಖಿಲಾರಿ' ಉಳಿದ ಭಾರತೀಯ ತಳಿಗಳಂತೆ ತನ್ನ ತನ್ನ ತವರಿನ ಹೆಸರಿಂದ ಗುರುತಿಸಲ್ಪಡದೆ ಇರುವ ಕೆಲವೇ ತಳಿಗಳಲ್ಲಿ ಒಂದು. ಮರಾಠಿಯಲ್ಲಿ ಖಿಲಾರ್ ಎಂದರೆ ಗುಂಪು, ಮಂದೆ ಎಂಬೆಲ್ಲ ಅರ್ಥಗಳಿವೆ. ಹಾಗೆ ಗುಂಪಿನಲ್ಲಿ ಸಾಕಲ್ಪಡುವುದರಿಂದಲೇ ಇದಕ್ಕೆ ಖಿಲಾರಿ ಎಂಬ ಹೆಸರಾಯಿತು. ಖಿಲಾರಿಯ ಮೂಲ ಬಾಂಬೆ ಕರ್ನಾಟಕ ಅಂತ ಗುರುತಿಸಲ್ಪಡುವ ಮಹಾರಾಷ್ಟ್ರದ ಸತಾರ ಖಟವಾದಿಂದ ಪ್ರಾರಂಭವಾಗಿ ಕರ್ನಾಟಕದ ಹಾವೇರಿಯವರೆಗಿನ ಪ್ರದೇಶ.



ಹೀಗೆ ಒಂದು ದೊಡ್ಡ ಭೌಗೋಳಿಕ ಪ್ರದೇಶದಲ್ಲಿ ಇದು ಗುರುತಿಸಿಕೊಂಡುದರಕ್ಕೊ ಏನೋ, ಇದನ್ನು ಆಯಾ ಪ್ರಾಂತ್ಯದ ಆಧಾರದ ಮೇಲೆ ಉಪತಳಿಗಳಾಗಿ ವರ್ಗೀಕರಿಸಿಕೊಂಡಿದ್ದಾರೆ. ಹನಮ್ ಖಿಲಾರಿ ಎಂದೂ ಕೂಡ ಕರೆಸಿಕೊಳ್ಳಲ್ಪಡುವ 'ಅಟ್ಪಾಡಿ' ಖಿಲಾರಿ, ದಕ್ಷಿಣ ಮರಾಠ ಪ್ರದೇಶವನ್ನು ಪ್ರತಿನಿಧಿಸಿದರೆ, ಸತಾರ ಶೊಲಾಪುರಗಳಲ್ಲಿ ಮುಖ್ಯವಾಗಿ ಕಾಣಿಸುವುದು 'ಮರಾಠಾವಾಡ್' ಖಿಲಾರಿ ಅಥವಾ ಮಾಸ್ವಾಡ್ ಖಿಲಾರಿ. ಸತ್ಪುರ ಪರ್ವತಪ್ರದೇಶಗಳು, ಪಶ್ಚಿಮ ಖಂಡೇಶ ಭಾಗಗಳು 'ತಪ್ತಿ' (ತಪತಿ)ಯ ಪ್ರಾಬಲ್ಯ ಪ್ರದೇಶಗಳು. ಇವೆಲ್ಲವುಗಳಿಗಿಂತ ಇತ್ತೀಚಿನದ್ದಾದ 'ನಕಲಿ' ಕೂಡ ಈ ಪ್ರದೇಶಗಳಲ್ಲೆ ಹೆಚ್ಚಾಗಿ ಕಾಣಸಿಗುತ್ತದೆ.



ಖಿಲಾರಿ, ಕರ್ನಾಟಕ

ನಾಲ್ಕೂವರೆಯಿಂದ ಐದು ಅಡಿ ಎತ್ತರದ ಖಿಲಾರಿ ಅತ್ಯಂತ ಪ್ರಸಿದ್ಧ ಕೆಲಸಗಾರ ತಳಿ. ಬಲಯುತವಾದ ಕುತ್ತಿಗೆ, ಬಿಗಿ ಚರ್ಮ, ಸ್ವಲ್ಪ ಹಳ್ಳಿಕಾರಿನಂತೆ ಕಾಣುವ ಕೊಂಬು ಇವು ಖಿಲಾರಿಯ ಮೇಲ್ನೋಟಕ್ಕೆ ಗುರುತಿಸಬಹುದಾದ ಲಕ್ಷಣಗಳು. ಖಿಲಾರಿಗಳ ಬಣ್ಣ ಬೂದು. ಅಟ್ಪಾಡಿ ಹಾಗೂ ಮಾಸ್ವಾಡ್ ಹೋರಿಗಳು ಹಣೆಯ ಭಾಗದಲ್ಲಿ ಹೆಚ್ಚು ಗಾಢವಾಗಿರುವ ಬೂದು ಬಿಳಿ ಬಣ್ಣವನ್ನು ಹೊಂದಿದ್ದರೆ ನಕಲಿಗಳದ್ದು ಸ್ವಲ್ಪ ಕಪ್ಪು ಮಿಶ್ರಿತ ಕೆಂಬಣ್ಣದ ಮುಂಭಾಗ ಹೊಂದಿರುತ್ತವೆ. ಹೀಗೆ ಇವುಗಳ ಮಧ್ಯ ಅಲ್ಪಸ್ವಲ್ಪ ವ್ಯತ್ಯಾಸವಿದೆಯಾದರೂ ಈ ಉಪತಳಿಗಳು ಶುದ್ಧರೂಪದಲ್ಲಿ ಕಾಣಸಿಗುವುದು ಕಷ್ಟಸಾಧ್ಯ ಅನ್ನುತ್ತಾರೆ ರಾಮಚಂದ್ರಾಪುರ ಮಠದ ಕಾಮದುಘಾ ಸಂಚಾಲಕ ಡಾ। ಕೃಷ್ಣಮೂರ್ತಿ.



ದಕ್ಷಿಣ ಮಹಾರಾಷ್ಟ್ರದ ಸತಾರ ಶೊಲ್ಲಾಪುರಗಳಲ್ಲಿ ಇವುಗಳನ್ನು ರೈತರೆ ಒಂದು ಎರಡರಂತೆ ಸಾಕುತ್ತಾರೆ. ಆದರೆ ಸತ್ಪುರ ಪ್ರಾಂತ್ಯದಲ್ಲಿ ಇದು ಒಂದು ಉದ್ಯಮವಾಗಿ ಬೆಳೆದಿದೆ. ಅಲ್ಲಿ ಥಿಲಾರಿಗಳು ಎಂದೆ ಕರೆಯಲ್ಪಡುವ ವೃತ್ತಿಪರ ಖಿಲಾರಿ ಸಾಕಣಿಕೆದಾರರು ದೊಡ್ಡ ಮಂದೆಗಳಲ್ಲಿ ಇವುಗಳನ್ನು ಸಾಕುತ್ತಾರೆ.

ಖಿಲಾರಿ ಹೋರಿಗಳಿಗೆ ಭಾರಿ ಬೇಡಿಕೆ ಬಯಲುಸೀಮೆ ಜಾನುವಾರು ಸಂತೆಗಳಲ್ಲಿ. ಇವು ಲಕ್ಷಾಂತರ ರೂಪಾಯಿಗಳಿಗೆ ಮಾರಾಟವಾಗುತ್ತವೆ. ಖಿಲಾರಿಗಳು ಪ್ರತಿಷ್ಠೆಯ ಸೂಚಕ ಕೂಡ. ಅವುಗಳಿಗೆ ಹಾಕಿದ ಹಣ ಸುಲಭವಾಗಿ ಹಿಂದಿರುಗಿ ಬರುತ್ತದೆ ಎನ್ನುತ್ತರೆ ಇಲ್ಲಿನ ರೈತರು. ಖಿಲಾರಿಗಳಿಗೋಸ್ಕರವೆ ರಾಜ್ಯಸರ್ಕಾರ ಬಂಕಾಪುರದಲ್ಲೊಂದು ಸಂರಕ್ಷಣ ಘಟಕವೊಂದನ್ನು ತೆರೆದಿದೆ.

**– ಮಧುಕೇಶ ದೊಡ್ಡೇರಿ**

# ಮುರಿಯುತ್ತಿರುವ ದೇಶದ ಬೆನ್ನೆಲುಬು – ಸಾವಯವ ಕೃಷಿಯೊಂದೇ ಪರಿಹಾರ

"೨೦೦೧-೨೦೦೮ರ ನಡುವೆ ಆತ್ಮಹತ್ಯೆಗೆ ಶರಣಾದ ರೈತರ ಸಂಖ್ಯೆ ೩೦,೦೦೦" ದಿನಪತ್ರಿಕೆಯೊಂದು ವರದಿ ಮಾಡಿತ್ತು. ಆಗ ಮನಸ್ಸಿನಲ್ಲಿ ಹುಟ್ಟಿದ ಪ್ರಶ್ನೆಯೊಂದೇ, 'ದೇಶದ ಬೆನ್ನೆಲುಬು ಮುರಿಯುತ್ತಿದೆಯೇ?' ಹೌದು ಎನ್ನುವುದಕ್ಕೆ ಸಾಕ್ಷಿ ಕಣ್ಣುಮುಂದೆಯೇ ಇತ್ತು, ವರದಿಯ ಮೂಲಕ. ಅನ್ನದಾತ ಸಾವಿಗೆ ಶರಣಾಗಲು ಕಾರಣವಾಗಿರುವ ಸಮಸ್ಯೆ ಯಾವುದು ಎಂದು ಕೆದಕುತ್ತಾ ಹೋದಾಗ, ಕಣ್ಣ ಮುಂದೆ ನಿಲ್ಲುವುದು ಸಾಲುಗಟ್ಟಿದ ಸಮಸ್ಯೆಗಳು; ಸಾಲಭಾದೆ, ಅತಿವೃಷ್ಟಿ, ಅನಾವೃಷ್ಟಿ, ರಸಗೊಬ್ಬರದ ಅಭಾವ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಇಷ್ಟಕ್ಕೂ ಈ ಎಲ್ಲಾ ಸಮಸ್ಯೆಗಳಿಗೂ ಆತ್ಮಹತ್ಯೆಯೊಂದೇ ಪರಿಹಾರವೇ? ಸಮಸ್ಯೆಗಳ ಭಾರವನ್ನು ಹೊರಲಾರದಷ್ಟು ದುರ್ಬಲವೇ ನಮ್ಮ ದೇಶದ ಬೆನ್ನೆಲುಬು? ಹೌದೆಂದು ಸಾಬೀತು ಪಡಿಸಿದೆ ಮುಂದುವರಿಯುತ್ತಲೇ ಇರುವ ರೈತರ ಆತ್ಮಹತ್ಯೆ. ಒಂದು ಕಡೆಯಿಂದ ಪ್ರಕೃತಿ ವಿಕೋಪ, ಇನ್ನೊಂದು ಕಡೆಯಿಂದ ಸರಕಾರದ ದಿವ್ಯ ನಿರ್ಲಕ್ಷ್ಯ, ಇವೆರಡರ ನಡುವೆ ರೈತ ಬೇಸತ್ತಿದ್ದಂತೂ ನಿಜ. ದೇವನ ಹಳ್ಳಿಯಲ್ಲಿ ಸರಕಾರ ವಿಮಾನ ನಿಲ್ದಾಣವನ್ನು ನಿರ್ಮಿಸಿತು. ಅದು ಲೋಕಾರ್ಪಣೆಯೂ ಆಯಿತು. ಆದರೆ ಕೃಷಿಭೂಮಿಯನ್ನು ಕಳೆದುಕೊಂಡವರ ಗೋಳಾದರೆ, ಇರುವ ಕೃಷಿ ಭೂಮಿಯನ್ನು ಫಲವತ್ತಾಗಿಸಲು ರಸಗೊಬ್ಬರ ದೊರಕುತ್ತಿಲ್ಲ ಎಂಬುದು ಇನ್ನೂ ಕೆಲವು ರೈತರ ಚಿಂತೆ.

ಹಾವೇರಿಯಲ್ಲಿ ರಸಗೊಬ್ಬರಕ್ಕಾಗಿ ನಡೆದ ಗಲಾಟೆಯ ಕಾವಿಗೆ ಇಡೀ ಕರ್ನಾಟಕವೇ ತತ್ತರಿಸಿದ್ದಂತೂ ನಿಜ. ಈ ಗಲಾಟೆಯಲ್ಲಿ ಗೋಲೀಬಾರ್‌ಗೆ ಸಿಲುಕಿ, ರೈತನೋರ್ವ ಪ್ರಾಣ ಕಳೆದುಕೊಳ್ಳಬೇಕಾಯಿತು. ಈ ಗಲಾಟೆ ಇನ್ನೂ ಜೀವಂತವಾಗಿರುವಾಗಲೇ ಮುಖ್ಯಮಂತ್ರಿಯ ಕಾರ್ಯಕ್ಷೇತ್ರವಾದ ಶಿಖಾರಿಪುರದಲ್ಲಿ, ಟ್ರಾಕ್ಟರ್ ಕೊಳ್ಳಲು ಮಾಡಿದ ಸಾಲವನ್ನು ಸಂದಾಯಮಾಡಲಾರದೆ, ರೈತನೋರ್ವ ಆತ್ಮಹತ್ಯೆಗೆ ಶರಣಾದ. ಸಾಲಮನ್ನಾ ಯೋಜನೆ ಇಲ್ಲಿ ಉಪಯೋಗಕ್ಕೆ ಬರಲಿಲ್ಲ.

ಇವೆಲ್ಲವನ್ನೂ ಗಮನಿಸಿದಾಗ, ಅನ್ನದಾತ ಎಷ್ಟು ತೀವ್ರವಾದ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಈ ಸಮಸ್ಯೆ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ; ದೇಶದ ಹಲವು ರಾಜ್ಯಗಳಲ್ಲಿ, ಪ್ರಪಂಚದ ಹಲವು ದೇಶಗಳಲ್ಲಿ ರೈತರು ಇಂತಹ ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ವಿಚಾರದಲ್ಲಿ 'ಕ್ಯೂಬಾ' ಎಂಬ ಪುಟ್ಟದೇಶ ಉತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಅಲ್ಲಿನ ರೈತರು ಸಮಸ್ಯೆಗಳನ್ನು ಪರಿಹರಿಸಿಕೊಂಡು, ಇತರ ದೇಶಗಳಿಗೆ ಮಾದರಿಯಾಗಿ ನಿಂತಿದ್ದಾರೆ. ಕ್ಯೂಬಾ ಕೇವಲ ೧೧ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಒಂದು ಪುಟ್ಟದೇಶ. ಇಲ್ಲಿಯ ಜನರಲ್ಲಿ ಬಹುಪಾಲು ಮಂದಿ ಕೃಷಿಕರು. ಅಧಿಕ ಇಳುವರಿಯನ್ನು ಪಡೆಯುವ ಸಹಜ ಹಂಬಲದಿಂದ ಇವರೂ ಅಮೇರಿಕಾದ ಸಲಹೆಯ ಮೇರೆಗೆ ಕೃಷಿಯಲ್ಲಿ ಅಧಿಕ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ಬಳಸತೊಡಗಿದರು. ನಿರೀಕ್ಷೆಗಿಂತ ಹೆಚ್ಚಾಗಿಯೇ ಇಳುವರಿ ಬಂತು. ಅಧಿಕ ಇಳುವರಿಯನ್ನು ಪಡೆಯುವುದೇ ಗುರಿಯಾಗಿದ್ದುದರಿಂದ ಕೃಷಿಭೂಮಿಯ ಫಲವತ್ತತೆ ಕುಂಠಿತವಾಗುತ್ತಿದ್ದುದು ಗಮನಕ್ಕೇ ಬರಲಿಲ್ಲ. ಅತಿಯಾದರೆ ಅಮೃತವೂ ವಿಷವಲ್ಲವೇ? ರಸಗೊಬ್ಬರಗಳ ಮಿತಿಮೀರಿದ ಬಳಕೆ, ಭೂಮಿಯ ಫಲವತ್ತತೆಯನ್ನೇ ಗುಡಿಸಿ ಹಾಕಿತು. ಜೊತೆಗೇ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಣ್ಣು-ತರಕಾರಿಗಳ ಬೆಲೆ ಕುಸಿಯಿತು.

ಇದನ್ನೇ ಕಾದಿದ್ದ ಅಮೇರಿಕಾ, ಈ ಪುಟ್ಟ ದೇಶವನ್ನು ತನ್ನ ಕಪಿಮುಷ್ಟಿಯಲ್ಲಿ ಇರಿಸಿಕೊಳ್ಳಲು ಸೂಕ್ತ ಸಮಯವೆಂದು, ರಸಗೊಬ್ಬರಗಳ, ಕೃಷಿಯಂತ್ರಗಳ ಸರಬರಾಜನ್ನೇ ನಿಲ್ಲಿಸಿತು. ಕ್ಯೂಬಾದ ಜನತೆಯ ಆರ್ಥಿಕ ಮಟ್ಟ ಕುಸಿಯಿತು. ತುತ್ತು ಅನ್ನಕ್ಕೂ ಪರದಾಡುವ ಸ್ಥಿತಿ ಎದುರಾಯಿತು. ಆದರೆ ಅಲ್ಲಿನ ಜನತೆ ಕಂಗೆಡಲಿಲ್ಲ. ಪುಟ್ಟದೇಶದ ಅನ್ನದಾತ, ಆತ್ಮಹತ್ಯೆಯನ್ನು ಮಾಡಿಕೊಳ್ಳುವಂತಹ ಸಣ್ಣ ಮನಸ್ಸನ್ನು ಹೊಂದಿರಲಿಲ್ಲ. ಫೀಡಲ್ ಕ್ಯಾಸ್ಟ್ರೋ ಎಂಬ ಧೀಮಂತ ನಾಯಕನನ್ನು ಹೊಂದಿದ್ದ ಕ್ಯೂಬಾ ಸರಕಾರ, ಕೈಕಟ್ಟಿ ಕೂರಲಿಲ್ಲ. ರೈತರಿಗೆ ಸಾವಯವ ಕೃಷಿಯನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಿತು. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ, ಕೃಷಿಕರಿಗೆ ಜಾನುವಾರುಗಳನ್ನು ಒದಗಿಸಿತು. ಕ್ಯೂಬಾದ ಪ್ರಜೆಗಳು ಉತ್ಸಾಹದಿಂದ ಸಾವಯವ ಕೃಷಿಕರಾಗಲು ಟೊಂಕಕಟ್ಟಿ ನಿಂತರು. ಜಮೀನಿದ್ದ ರೈತರು, ಎತ್ತುಗಳ ಸಹಾಯದಿಂದ ಹೊಲವನ್ನು ಉತ್ತರು. ಇಲ್ಲದವರು ಮನೆಯ ಮುಂದೆ ಕೈತೋಟಗಳನ್ನು ನಿರ್ಮಿಸಿದರು. ತಮ್ಮ-ತಮ್ಮಲ್ಲೇ ತೋಟಿಗರ ಗುಂಪುಗಳನ್ನು ಮಾಡಿಕೊಂಡು ಶ್ರದ್ಧೆಯಿಂದ ದುಡಿದರು. ಇಂದು ಕ್ಯೂಬಾದಲ್ಲಿ ೬ಂಕ್ಕಿಂತಲೂ ಹೆಚ್ಚು ತೋಟಿಗರ ಗುಂಪುಗಳಿವೆ. ೨೩ಂಕ್ಕಿಂತಲೂ ಹೆಚ್ಚು ಕೈತೋಟಗಳಿವೆ. ರೈತರು ಬೆಳೆದ ಹಣ್ಣು-ತರಕಾರಿಗಳಿಗೆ ಸರಕಾರ ಸೂಕ್ತ ಮಾರುಕಟ್ಟೆಯನ್ನು ಒದಗಿಸಿದೆ. ಇಂದು ಕ್ಯೂಬಾ ೯೩೨ ಕೃಷಿ ಮಾರುಕಟ್ಟೆಗಳನ್ನು ಹೊಂದಿದೆ. ಜನತೆಯ ಪರಿಶ್ರಮದಿಂದ ದೇಶ ಹಸಿರಾಗಿದೆ. ಸಾರ ಕಳೆದುಕೊಂಡಿದ್ದ ಭೂಮಿ, ಸಾವಯವ ಕೃಷಿಯಿಂದ ಫಲವತ್ತಾಗಿದೆ; ಮನೆಯ ಅಂಗಳದಲ್ಲಿ ಮಾತ್ರವಲ್ಲ, ಟೆರೇಸ್‌ನ ಮೇಲೂ ಗಿಡಗಳು ನಳನಳಿಸುತ್ತಿವೆ. ಪುಟ್ಟ ದೇಶ ಕ್ಯೂಬಾ ಇತರ ದೇಶಗಳಿಗೆ ಮಾದರಿಯಾಗಿ ನಿಂತಿದೆ.

ನಮ್ಮ ರೈತರೂ ಸಾವಯವ ಕೃಷಿಯನ್ನು ಅನುಸರಿಸಿದ್ದರೆ, ಆತ್ಮಹತ್ಯೆಗಳ ಸಂಖ್ಯೆ ಇಳಿಮುಖವಾಗುತ್ತಿತ್ತೋ ಏನೋ? ಹಟ್ಟಿಗೊಬ್ಬರಕ್ಕಿಂತ ಬೇರೆ ಗೊಬ್ಬರ ಬೇಕೇ? ಹಾಗೆಯೇ ಗೋಮೂತ್ರದಿಂದ ತಯಾರಿಸಿದ 'ಜೀವಾಮೃತ' ಅತ್ಯುತ್ತಮ ಕೀಟನಾಶಕ. ಗೋಮೂತ್ರ, ಗೋಮಯಗಳ ಮಿಶ್ರಣ, ಅಧಿಕ ಇಳುವರಿ ಪಡೆಯಲು ಸಹಕಾರಿ. ಸೆಗಣಿಯಲ್ಲಿ ಮಣ್ಣನ್ನು ಸಾರವತ್ತಾಗಿ ಮಾಡುವ ಬ್ಯಾಕ್ಟೀರಿಯಾಗಳು ತುಂಬ ಇವೆ. ಇವು ಭೂಮಿಯನ್ನು ಫಲವತ್ತಾಗಿ ಮಾಡುತ್ತವೆ.

ಇದನ್ನೆಲ್ಲಾ ಗಮನಿಸಿದಾಗ, ನಮ್ಮ ದೇಶದಲ್ಲೂ, ಅದರಲ್ಲೂ ಕರ್ನಾಟಕದಲ್ಲಿ ರೈತರು ರಸಗೊಬ್ಬರಕ್ಕಾಗಿ ಪ್ರಾಣ ತೆರಬೇಕಾಗಿರಲಿಲ್ಲ ಎಂದು ತೋರುತ್ತದೆ. ಟ್ರಾಕ್ಟರ್‌ಗಳ ಬದಲಿಗೆ ಎತ್ತುಗಳನ್ನೇ ಉಪಯೋಗಿಸಿ ಹೊಲವನ್ನು ಉತ್ತಿದ್ದರೆ, ಸಾಲದ ಸಮಸ್ಯೆಯೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿತ್ತು.

ಇದನ್ನೆಲ್ಲಾ ಗಮನಿಸಿದಾಗ, ನಮ್ಮ ದೇಶದಲ್ಲೂ, ಅದರಲ್ಲೂ ಕರ್ನಾಟಕದಲ್ಲಿ ರೈತರು ರಸಗೊಬ್ಬರಕ್ಕಾಗಿ ಪ್ರಾಣ ತೆರಬೇಕಾಗಿರಲಿಲ್ಲ ಎಂದು ತೋರುತ್ತದೆ. ಟ್ರಾಕ್ಟರ್‌ಗಳ ಬದಲಿಗೆ ಎತ್ತುಗಳನ್ನೇ ಉಪಯೋಗಿಸಿ ಹೊಲವನ್ನು ಉತ್ತಿದ್ದರೆ, ಸಾಲದ ಸಮಸ್ಯೆಯೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗುತ್ತಿತ್ತು.

ರಾಯಚೂರಿನಲ್ಲಿ ಒಂದು ರೈತಕುಟುಂಬ ಎತ್ತುಗಳನ್ನು ಉಪಯೋಗಿಸದೆ ತಾವೇ ನೇಗಿಲು ಹೊತ್ತು ಹೊಲವನ್ನು ಉತ್ತಿದ್ದಾರೆ ಎಂಬುದು ಗಮನಿಸಬೇಕಾದ ಅಂಶ.

ಇದನ್ನೆಲ್ಲಾ ಉಳಿದ ರೈತರೂ ಅನುಸರಿಸಿದ್ದಿದ್ದರೆ, ಕುಣಿಕೆಗೆ ಕೊರಳೊಡ್ಡುವುದು ತಪ್ಪುತ್ತಿತ್ತು. ಹೈನುಗಾರಿಕೆಯಿಂದ, ಹಾಲಿನ ಉತ್ಪನ್ನಗಳಿಂದ ಬದುಕೂ ಹಸನಾಗುತ್ತಿತ್ತು. ಯಾರ ಹಂಗೂ ಇಲ್ಲದ ಸ್ವತಂತ್ರ ಬದುಕಿನ ಕನಸು ನನಸಾಗುತ್ತಿತ್ತು. ವಿಷರಹಿತ, ಶುದ್ಧ ಆಹಾರದಿಂದ ಆರೋಗ್ಯಪೂರ್ಣ ಬದುಕು ನಮ್ಮದಾಗುತ್ತಿತ್ತು. ರೈತರು ಸಾವಯವ ಕೃಷಿಯನ್ನು ಮಾಡಲಿ, ಎಲ್ಲರ ಬದುಕೂ ಹಸನಾಗಲಿ ಎಂದು ಹಾರೈಸೋಣ.

– **ಶೋಭನಾ ಯರ್ಮುಂಜ**

## ಗೋವು ಮತ್ತು ಕೃಷಿ

**ಶ್ರೀ ಸುಭಾಷ್ ಪಾಳೇಕರರ 'ಶೂನ್ಯ ಬಂಡವಾಳದ ಲಾಭದಾಯಕ ನೈಸರ್ಗಿಕ ಕೃಷಿ'ಯ ಪರಿಚಯಾತ್ಮಕ ಪುಸ್ತಿಕೆ**

(ಕಳೆದ ಸಂಚಿಕೆಯಿಂದ ಮುಂದುವರೆದುದು) – **ಪರೀಕ್ಷಿತ ತೋಳ್ಪಾಡಿ ಎಸ್.**

ವಿದೇಶೀ ದನಗಳ ಒಂದು ಗ್ರಾಂ ಸೆಗಣಿಯಲ್ಲಿ ಸುಮಾರು ೭೦ ಲಕ್ಷ ಬ್ಯಾಕ್ಟೀರಿಯಾಗಳು ಇದ್ದರೂ ಇವು ಸಸ್ಯ ಪೋಷಕಾಂಶಗಳನ್ನು ಭೂಮಿಯಿಂದ ಪೂರೈಸುವಂತೆ ಸೃಷ್ಟಿಸಲ್ಪಟ್ಟಿಲ್ಲ ಎಂದು ತಿಳಿಸುವ ಪಾಳೇಕರ್ ನೈಸರ್ಗಿಕ ಕೃಷಿ ವಿಧಾನದಲ್ಲಿ ವಿದೇಶಿ ಜಾನುವಾರುಗಳನ್ನು ಸಂಪೂರ್ಣವಾಗಿ ನಿಷೇಧಿಸುತ್ತಾರೆ.

ಕೇವಲ ಒಂದು ದೇಶೀ ತಳಿಯ ಗೋವಿನಿಂದ (ದೇಶೀಯ ಎಲ್ಲ ಜಾನುವಾರುಗಳೂ ಅಂದರೆ ಎಮ್ಮೆ, ಕೋಣ, ಎತ್ತು ಈ ಎಲ್ಲವುಗಳ ಸೆಗಣಿಯಲ್ಲೂ ಮೇಲಿನ ಗುಣಗಳಿವೆ ಮತ್ತು ಇವೆಲ್ಲವುಗಳನ್ನು ನೈಸರ್ಗಿಕ ಕೃಷಿಯಲ್ಲಿ ಬಳಸಬಹುದು. ಕೇವಲ ದನಗಳೇ ಆಗಬೇಕಿಲ್ಲ) ೧೫ರಿಂದ ೩೦ ಎಕರೆ ಪ್ರದೇಶದ (ಆಯಾ ತಳಿಯ ದನಗಳು ಒಂದು ದಿವಸಕ್ಕೆ ಹಾಕುವ ಸೆಗಣಿ–ಮೂತ್ರಗಳ ಪ್ರಮಾಣವನ್ನು ಆಧರಿಸಿ) ಎಲ್ಲ ಬೆಳೆಗಳಿಗೆ ಸಮೃದ್ಧ ಗೊಬ್ಬರ ಪೂರೈಕೆ ಸಾಧ್ಯ ಎನ್ನುವ ಕ್ರಾಂತಿಕಾರಕ ಪೋಷಣೆಯನ್ನು ಮಾಡುವ ಪಾಳೇಕರ್ ಅವರ ನೈಸರ್ಗಿಕ ಕೃಷಿಯ ನಾಲ್ಕು ಪ್ರಧಾನ ಅಂಶಗಳು ಇವು.

೧. ಸ್ಥಳೀಯ ತಳಗಳು ಮತ್ತು ಬೀಜಾಮೃತ
೨. ಜೀವಾಮೃತ
೩. ಮುಚ್ಚಿಗೆ ಮತ್ತು ಅಂತರ ಬೆಳೆಗಳು
೪. ಆರ್ದ್ರತೆ ಅಥವಾ ತೇವಾಂಶ

**ಸ್ಥಳೀಯ ಬೀಜಗಳು ಮತ್ತು ಬೀಜಾಮೃತ:**

ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಕೇವಲ ನಮ್ಮದೇ ನೆಲದ, ಇಲ್ಲಿಯ ವೈವಿಧ್ಯಗಳಿಗನುಸಾರವಾಗಿ ಸೂಕ್ಷ್ಮವಾಗಿ ರೂಪುಗೊಂಡ ದೇಶೀಯ ತಳಿ; ಬೀಜಗಳನ್ನಷ್ಟೇ ಉಪಯೋಗಿಸಬೇಕಾಗುತ್ತದೆ. ಅನಿವಾರ್ಯವೆಂದಾದರಷ್ಟೇ ಹೈಬ್ರೀಡ್ ಬೀಜಗಳನ್ನು ಉಪಯೋಗಿಸಿ. ಕುಲಾಂತರಿ, ಟರ್ಮಿನೇಟರ್ ಇತ್ಯಾದಿ ವಿಕೃತಗಳನ್ನು ದೂರವಿರಿಸಿ.

ನಮ್ಮ ದೇಶೀ ತಳಿಗಳು ರೋಗ ಪ್ರತಿಬಂಧಕ ಶಕ್ತಿಯನ್ನು ಹೊಂದಿರುತ್ತವೆ. ಬರ–ನೆರೆಗಳಂಥ ಪ್ರಾಕೃತಿಕ ವಿಕೋಪಗಳ ಸಮಯದಲ್ಲೂ ಬೆಳೆಕೊಡುವ ಪ್ರಚಂಡ ಶಕ್ತಿ ಅವುಗಳಲ್ಲಿ ನಿಹಿತವಾಗಿರುತ್ತವೆ. ಆಯಾ ಪ್ರದೇಶಗಳ ವೈಶಿಷ್ಟ್ಯಗಳಿಗೆ ಅನುಗುಣವಾದ ಗುಣ – ಸ್ವಭಾವಗಳನ್ನು ಅವು ಹೊಂದಿರುತ್ತವೆ.

ಈ ಎಲ್ಲ ಸೂಕ್ಷ್ಮಗಳನ್ನೂ ನಮ್ಮ ಕೃಷಿ ವಿಜ್ಞಾನಿಗಳು ನಿರ್ಲಕ್ಷಿಸಿ ಕೇವಲ ಹೆಚ್ಚು ಇಳುವರಿಯನ್ನು ಮಾತ್ರ ನೀಡುವಂಥ ತಳಿಗಳನ್ನು ರೂಪಿಸಿದರು. ಇವು ಪರಿಸರದ ಸೂಕ್ಷ್ಮ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲಾಗದೆ ರೋಗಕ್ಕೆ ತುತ್ತಾದರೆ ನಮ್ಮ ವಿಜ್ಞಾನಿಗಳು ಭೀಕರ ವಿಷಗಳನ್ನೇ ಅವುಗಳಿಗೆ ಪ್ರತಿಬಂಧವಾಗಿ ಉಪಯೋಗಿಸಲು ಹೇಳುತ್ತಾರೆ.

ಇರಲಿ, ಹೈಬ್ರಿಡ್ ತಳಿಗಳು ಬರುವ ಮುಂಚಿನ ಭಾರತದ ಭತ್ತದ ತಳಿ ವೈವಿಧ್ಯವನ್ನು ಗಮನಿಸಿದರೆ ವಿಸ್ಮಯವಾಗುತ್ತದೆ. ನಮ್ಮಲ್ಲಿದ್ದ ಭತ್ತದ ತಳಿಗಳೆಷ್ಟು ಗೊತ್ತೇ? ೨,೦೦,೦೦೦ಕ್ಕೂ ಹೆಚ್ಚು! ಈ ಸಂಖ್ಯೆಯೊಂದೇ ಭಾರತದ ರೈತರ ಜಾಣ್ಮೆಗೆ, ಅವರ ಸಮಾಜಬದ್ಧ ನಿಲುಮೆಗೆ ನಿದರ್ಶನವಾಗಬಲ್ಲುದು. ಅಂಥ ಭಾರತದಲ್ಲಿ ಈಗಿರುವ ಭತ್ತದ ತಳಿಗಳ ಸಂಖ್ಯೆಯೆಷ್ಟು ಗೊತ್ತೇ? ಕೇವಲ ನೂರಕ್ಕಿಂತ ಸ್ವಲ್ಪ ಹೆಚ್ಚು!

ಬೀಜಾಮೃತವೆಂದರೆ ಬೀಜಗಳ ಮೊಳಕೆಯೊಡೆವ ಶಕ್ತಿಯನ್ನು ವರ್ಧಿಸುವ ರೋಗ ನಿರೋಧಕ ಶಕ್ತಿಯನ್ನು ತುಂಬುವ ಬೀಜೋಪಚಾರಕ್ಕಾಗಿ ಬಳಸುವ ದ್ರಾವಣ. ಅಂದಾಜು ೨೦ ಲೀಟರ್ ನೀರನ್ನು ತೆಗೆದುಕೊಳ್ಳಿ. ಒಂದು ತೆಳುವಾದ ಹತ್ತಿ ಬಟ್ಟೆಯಲ್ಲಿ ಅಂದಾಜು ೫ ಕೇಜಿ ಸಗಣಿಯನ್ನು ಗಂಟುಕಟ್ಟಿ, ೨೦ ಲೀಟರ್ ಇರುವ ಪಾತ್ರೆಯ ನೀರಿನ ಮಧ್ಯಕ್ಕೆ ಬರುವಂತೆ ಒಂದು ಕೋಲಿನಿಂದ ಕಟ್ಟಿ ನೇತಾಡಿಸಿ. ೨೫೦ ಗ್ರಾಂ ಸುಣ್ಣವನ್ನು ತೆಗೆದುಕೊಂಡು (ಯಾವ ಸುಣ್ಣವೂ ಆದೀತು ಚಿಪ್ಪು ಸುಣ್ಣ, ಕಲ್ಲುಸುಣ್ಣ, ಹುಡಿ ಸುಣ್ಣ) ಅದನ್ನು ಒಂದು ಲೀಟರ್ ನೀರಿನಲ್ಲಿ ಹಾಕಿಡಿ. ೧೨ ಗಂಟೆಗಳ ನಂತರ ಸೆಗಣಿಯನ್ನು ಚೆನ್ನಾಗಿ ಹಿಂಡಿ ಸಾರವೆಲ್ಲ ನೀರಿನಲ್ಲಿ ಮಿಶ್ರವಾಗುವಂತೆ ಕುಲುಕಿಸಿ. ಗಂಟು ಬಿಚ್ಚಬೇಕೆಂದಿಲ್ಲ. ಸುಣ್ಣದ ಮೇಲ್ಭಾಗದ ತಿಳಿ ನೀರನ್ನು ಈ ಸೆಗಣಿ ನೀರಿಗೆ ಬೆರೆಸಿ. ನಂತರ ೫ ಲೀಟರ್ ಗಂಜಲವನ್ನು (ಹಟ್ಟಿಯಿಂದ ಹರಿದು ಬಂದ ಸೆಗಣಿ, ನೀರು ಮಿಶ್ರಿತವಾಗಿರುವ ಗೋಮೂತ್ರ) ಮಿಶ್ರಮಾಡಿ. ಇದೀಗ ಬೀಜಾಮೃತ ಸಿದ್ಧ. ಇನ್ನು ಮುಂದಿನ ೧೨ ಗಂಟೆಗಳ ಒಳಗೆ ಇದನ್ನು ಉಪಯೋಗಿಸಬೇಕು. ಯಾವುದೇ ಧಾನ್ಯಗಳ, ತರಕಾರಿಗಳ ಬೀಜಗಳನ್ನು ಕೇವಲ ಒಂದು ನಿಮಿಷ ಬೀಜಾಮೃತದಲ್ಲಿ ಮುಳುಗಿಸಿ, ನೆರಳಿನಲ್ಲಿ ಸ್ವಲ್ಪ ಹೊತ್ತು ಒಣಗಿಸಿ ಬಿತ್ತನೆ ಮಾಡಿ. ಬಾಳೆಗಡ್ಡೆ, ಭತ್ತದ ಪೈರು,

ಮೆಣಸಿನ ಸಸಿ ಇತ್ಯಾದಿಗಳಿಗೆ ೨೦ ಲೀಟರ್‌ನ ಬದಲು ೫೦ ಲೀಟರ್ ನೀರು ತೆಗೆದುಕೊಳ್ಳಿ. ಇವುಗಳನ್ನೂ ಅಷ್ಟೇ. ಕೇವಲ ಬೇರಿನ ಭಾಗವನ್ನು ಒಂದು ನಿಮಿಷ ಮುಳುಗಿಸಿದರೆ ಸಾಕು. ಈ ಪ್ರಮಾಣವನ್ನು ಸಾಧಾರಣ ಒಂದು ಎಕರೆ ಪ್ರದೇಶಕ್ಕೆ ಬೇಕಾಗುವ ಬೀಜ, ಸಸಿ, ಗಡ್ಡೆಗಳಿಗೆ ಹೇಳಲಾಗಿದೆ. ಬೀಜದ ಪ್ರಮಾಣವನ್ನು ಹೊಂದಿಕೊಂಡು ಎಷ್ಟು ಬೇಕೋ ಅಷ್ಟು ಬೀಜಾಮೃತವನ್ನು ಸಿದ್ಧಪಡಿಸಲೂಬಹುದು. ಬೀಜೋಪಚಾರದ ನಂತರ ಬೀಜಾಮೃತವನ್ನು ನಿಮ್ಮ ಕೃಷಿ ಭೂಮಿಗೆ ಅಲ್ಲಲ್ಲಿ ಚೆಲ್ಲಿಬಿಡಿ. ಬೀಜ ಭೂಮಿಗೆ ಬಿತ್ತನೆಯಾದ ನಂತರವೂ ಬೀಜಾಮೃತದಲ್ಲಿದ್ದ ಲಕ್ಷಾಂತರ ಜೀವಾಣುಗಳು ಭೂಮಿಯಲ್ಲಿ ವೃದ್ಧಿಸಿ ರೋಗಾಣುಗಳಿಂದ, ಶಿಲೀಂಧ್ರಗಳಿಂದ ಬೀಜವನ್ನು ಕಾಪಾಡುತ್ತವೆ.

**ಜೀವಾಮೃತ:**

ನೈಸರ್ಗಿಕ ಕೃಷಿಯಲ್ಲಿ ಜೀವಾಮೃತವೊಂದೇ ಕೃಷಿಕ ತನ್ನ ಭೂಮಿಗೆ ನೀಡಬೇಕಾಗಿರುವ ಏಕಮಾತ್ರ ಒಳಸುರಿ. ಈ ಜೀವಾಮೃತದ ತಯಾರಿ ಹೀಗೆ.

೧೦ಕೇಜಿ ಸೆಗಣಿ, ೧೦ ಲೀಟರ್ ಗಂಜಲ, ೨ಕಿಲೋ ಯಾವುದೇ ದ್ವಿದಳ ಧಾನ್ಯದ ಹಿಟ್ಟು ಅಥವಾ ಹುಡಿ, ೨ಕಿಲೋ ಕಳಪೆ ದರ್ಜೆಯ ಬೆಲ್ಲ, ೧ ಹಿಡಿ ನಿಮ್ಮ ಭೂಮಿಯ ಮಣ್ಣು ಮತ್ತು ೨೦೦ ಲೀಟರ್ ನೀರು. ಒಂದು ೨೦೦ ಲೀಟರ್ ಹಿಡಿಯುವ ಪ್ಲಾಸ್ಟಿಕ್ ಇಲ್ಲವೇ ಸಿಮೆಂಟ್ ಡ್ರಮ್, ತೊಟ್ಟಿಯಲ್ಲಿ ಇವೆಲ್ಲವನ್ನೂ ಒಟ್ಟಿಗೇ ಹಾಕಿ ಪ್ರದಕ್ಷಿಣಾಕಾರವಾಗಿ ತಿರುಗಿಸಿದರೆ ಜೀವಾಮೃತ ಸಿದ್ಧವಾದಂತೆ. ಈ ರೀತಿಯ ಡ್ರಮ್‌ಗಳಿಲ್ಲದವರು ಭೂಮಿಯಲ್ಲೇ ೨೦೦ ಲೀ. ಹಿಡಿಯುವಂತಹ ಗುಂಡು ಮಾಡಿ ಸೆಗಣಿ ಸಾರಿಸಿ ಅದರಲ್ಲಿಯೂ ಜೀವಾಮೃತ ಮಾಡಬಹುದು.

ಸೆಗಣಿಯಲ್ಲಿರು ಬಗೆಬಗೆಯ ಜೀವಾಣುಗಳು ಈ ಜೀವಾಮೃತದಲ್ಲಿ ಅಸಂಖ್ಯವಾಗಿ ವೃದ್ಧಿಯಾಗುತ್ತವೆ. ಮತ್ತು ಜೀವಾಮೃತವನ್ನು ಭೂಮಿಗೆ ಹಾಕಿದ ತಕ್ಷಣ ಪ್ರತಿ ೨೦ ನಿಮಿಷಗಳಿಗೊಮ್ಮೆ ಜೀವಾಣುಗಳು ದ್ವಿಗುಣಗೊಳ್ಳುತ್ತಾ ಭೂಮಿ ಅಕ್ಷರಶಃ ಜೀವಂತವಾಗುತ್ತದೆ.

ಈ ೨೦೦ ಲೀಟರ್ ಜೀವಾಮೃತ ಒಂದು ಎಕರೆ ಪ್ರದೇಶದ ಎಲ್ಲ ಬೆಳೆಗಳಿಗೂ ಒಂದು ತಿಂಗಳಿಗೆ ಸಾಕು. ಪ್ರತಿ ತಿಂಗಳೂ ಜೀವಾಮೃತ ನೀಡಬೇಕು. ಒಂದು ಹಸು ದಿವಸಕ್ಕೆ ೧೦ ಕೇಜಿ ಸಗಣಿ ಮತ್ತು ೧೦ ಲೀಟರ್ ಗೋಮೂತ್ರವನ್ನು ಕೊಡುತ್ತದೆ ಎಂದಾದರೆ ಆ ಒಂದು ದನದಿಂದ ಸಿದ್ಧಪಡಿಸುವ ಜೀವಾಮೃತದಿಂದ ೩೦ ಎಕರೆ ಪ್ರದೇಶಗಳಿಗೆ ಸಮೃದ್ಧ ಪೋಷಕಾಂಶ ಪೂರೈಕೆ ಸಾಧ್ಯ!

ದ್ವಿದಳ ಧಾನ್ಯದ ಹಿಟ್ಟು ಮತ್ತು ಬೆಲ್ಲಗಳು ಸೆಗಣಿಯಲ್ಲಿರುವ ಜೀವಾಣುಗಳ ಸಂಖ್ಯಾಸ್ಫೋಟಕ್ಕೆ ವೇಗವರ್ಧಕಗಳಾಗಿ ಉಪಕರಿಸುತ್ತವೆ. ಇವುಗಳ ಮತ್ತು ಗಂಜಲದ ಪ್ರಮಾಣ ಸ್ವಲ್ಪ ಹೆಚ್ಚು ಕಮ್ಮಿಯಾದರೂ ಚಿಂತೆಯಿಲ್ಲ.

ಈ ದ್ರಾವಣವನ್ನು ಹಾಗೆಯೇ ಒಂದು ಎಕರೆಗೆ ಅಲ್ಲಲ್ಲಿ ಹನಿಸುತ್ತ, ಚೆಲ್ಲುತ್ತ ಹೋಗಬಹುದು. ಗಿಡಗಳ ಬುಡಗಳಿಗೂ ಎರೆಯಬಹುದು. ನೀರ ಕಾಲುವೆಗೂ ಹೊಯ್ಯಬಹುದು. ಸ್ಪ್ರಿಂಕ್ಲರ್ ಮುಖಾಂತರ, ಡ್ರಿಪ್ ಮುಖೇನ ಕೂಡ ನೀಡಬಹುದು ಇಲ್ಲವೇ ಸೋಸಿ ಸಿಂಪಡಿಸಲೂಬಹುದು.

ಬ್ಯಾಕ್ಟೀರಿಯಾಗಳು ಭೂಮಿಗೆ ಬಿದ್ದ ತತ್‌ಕ್ಷಣದಿಂದಲೇ ದ್ವಿಗುಣಗೊಳ್ಳಲಾರಂಭಿಸುವುದರಿಂದ ಜೀವಾಮೃತವನ್ನು ಎಲ್ಲಿ, ಹೇಗೆ ಬೇಕಾದರೂ ನೀಡಬಹುದು. ಗೋಬರ್ ಗ್ಯಾಸ್ ಸ್ಲರಿ ಇದ್ದರೆ ಸೆಗಣಿ ೫ಕೆ.ಜಿ. ಸಾಕು. ಸ್ಲರಿಯನ್ನು ೫ರಿಂದ ೮ ಲೀ.ವರೆಗೆ ಸೇರಿಸಬಹುದು. ಸ್ವಲ್ಪ ಹೆಚ್ಚು ಕಮ್ಮಿಯಾದರೂ ಯಾವುದೇ ತೊಂದರೆ ಇಲ್ಲ.

ಈಗ ಸಸ್ಯಗಳ ಬೆಳವಣಿಗೆಗೆ ಅಗತ್ಯವಾಗಿರುವ ಅಂಶಗಳನ್ನು ಜೀವಾಮೃತ ಹೇಗೆ ಪೂರೈಸುತ್ತದೆ ಎನ್ನುವುದನ್ನು ತುಸು ವಿವರವಾಗಿ ನೋಡೋಣ. ನಮಗೆಲ್ಲ ತಿಳಿದಂತೆ ಸಸ್ಯಗಳು ನೆಲದಿಂದ ತೇವಾಂಶ ಮತ್ತು ವಾತಾವರಣದಿಂದ ಇಂಗಾಲದ ಡೈ ಆಕ್ಸೈಡ್‌ನ್ನು ಪಡೆದು ಸೂರ್ಯನ ಬೆಳಕನ್ನು ಉಪಯೋಗಿಸಿ ಪತ್ರ ಹರಿತ್ತಿನ ಸಹಾಯದಿಂದ ತಮ್ಮ ಪ್ರಮುಖ ಆಹಾರವಾದ ಶರ್ಕರ ಪಿಷ್ಟಗಳನ್ನು ತಯಾರಿಸಿಕೊಳ್ಳುತ್ತವೆ.

ಇನ್ನು ಸಾರಜನಕ, ರಂಜಕ ಮತ್ತು ಪೊಟ್ಯಾಶ್‌ಗಳೆಂಬ ಮೂರು ಪ್ರಧಾನ ಸತ್ವಗಳು. ಸಾರಜನಕ ವಾತಾವರಣದಲ್ಲಿ ೭೮.೬%ನಷ್ಟು ಅಧಿಕ ಪ್ರಮಾಣದಲ್ಲಿ ಇದೆ. ಹೀಗೆ ಸಾರಜನಕದ ಮಹಾಸಾಗರವೇ ಸುತ್ತುವರೆದಿದ್ದರೂ ಯೂರಿಯಾ ಇತ್ಯಾದಿಗಳನ್ನು ಹಾಕಿ ಬೆಳೆಗಳಿಗೆ ಸಾರಜನಕವನ್ನು ಪೂರೈಸಬೇಕು ಎನ್ನುವ ಕೃಷಿ ವಿಜ್ಞಾನಿಗಳ ಮಾತನ್ನು ಪಾಳೇಕರ್ ಹಾಸ್ಯ ಮಾಡುತ್ತಾರೆ. ಅಷ್ಟೇ ಅಲ್ಲ ಅದರ ಹಿಂದೆ ಗೊಬ್ಬರ ತಯಾರಕರ ಕೃಷಿಕ ಶೋಷಕ ವ್ಯವಸ್ಥೆಯೊಂದನ್ನು ಗುರುತಿಸುತ್ತಾರೆ.

ನೈಸರ್ಗಿಕ ಕೃಷಿಯ ಪ್ರಧಾನ ಅಂಶವೇ ಇದು. ಬೆಳೆಗಳಿಗೆ ಬೇಕಾದ ಸಾರಜನಕವನ್ನು ದ್ವಿದಳ ಧಾನ್ಯಗಳ ಅಂತರ ಕೃಷಿಯಿಂದಲೇ ಪೂರೈಸಲು ಸಾಧ್ಯ ಎನ್ನುವುದು. ದ್ವಿದಳ ಧಾನ್ಯಗಳ ಬೇರಿನ ಗಂಟುಗಳಲ್ಲಿರುವ ರೈಜೋಬಿಯಂ ಜೀವಾಣುಗಳು ವಾತಾವರಣದಿಂದ ಸಾರಜನಕವನ್ನು ಹೀರಿ ಬೇರಿನಲ್ಲಿ ಸಂಗ್ರಹಿಸಿ ಉಳಿದ ಬೆಳೆಗಳಿಗೆ ನೀಡುತ್ತವೆ. ಹೀಗಾಗಿ ನಮ್ಮ ಪ್ರಮುಖ ಬೆಳೆಗಳ ಮಧ್ಯೆ ಕ್ಲುಪ್ತವಾಗಿ ಬೆಳೆವ ದ್ವಿದಳ ಧಾನ್ಯಗಳ ಬೆಳೆ ಜೀವಾಮೃತಕ್ಕೆ ಬೇಕಾದ ದ್ವಿದಳ ಧಾನ್ಯವನ್ನೂ ನೀಡುತ್ತದೆ. ಜೊತೆಗೆ ಪ್ರಮುಖ ಬೆಳೆಗೆ ಸಾರಜನಕವನ್ನೂ.

ರಂಜಕವೂ (ಫಾಸ್ಫೇಟ್) ಭೂಮಿಯಲ್ಲಿ ದ್ವಣುಕ ಇಲ್ಲವೇ ತ್ರ್ಯಣುಕ ರೂಪದಲ್ಲಿ ಅಗಾಧ ಪ್ರಮಾಣದಲ್ಲಿ ನಿಹಿತವಾಗಿದೆ. ದೇಶೀ ಆಕಳ ಸೆಗಣಿಯಲ್ಲಿರುವ ಫಾಸ್ಫೇಟ್ ಸಾಲ್ಯುಬಲೈಜಿಂಗ್ ಬ್ಯಾಕ್ಟೀರಿಯಾಗಳು (ಪಿ.ಎಸ್.ಬಿ. ಬ್ಯಾಕ್ಟೀರಿಯಾಗಳು)– ಇವು ೧೦ ಕೇಜಿ ಸೆಗಣಿಯಲ್ಲಿ ಸುಮಾರು ೩೦ ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ ಮತ್ತು ಜೀವಾಮೃತದಲ್ಲಿ ಇವುಗಳ ಸಂಖ್ಯೆ ಅನಂತವಾಗುತ್ತದೆ –ಈ ರಂಜಕದ ಕಣಗಳನ್ನು ವಿಭಜಿಸಿ ಸಸ್ಯಗಳ ಬೇರುಗಳಿಗೆ ನೀಡುತ್ತವೆ.

ಪೊಟ್ಯಾಶ್ ಅನ್ನು ಪೂರೈಸುವ ಜೀವಾಣು ಬ್ಯಾಸಿಲಸ್ ಸಿಲಿಕಸ್. ಇವು ಭೂಮಿಯಲ್ಲಿರುವ ಸಿಲಿಕೇಟ್ ಸಂಯುಕ್ತಗಳನ್ನು ವಿಭಜಿಸಿ ಪೊಟ್ಯಾಶ್ ಅನ್ನು ಗಿಡ–ಮರಗಳಿಗೆ ಒದಗಿಸುತ್ತವೆ. ಸೆಗಣಿಯಲ್ಲಿ ಸುಮಾರು ೬೭ ವಿಭಿನ್ನ ಬಗೆಯ ಬ್ಯಾಸಿಲಸ್ ಸಿಲಿಕಸ್ ಬ್ಯಾಕ್ಟೀರಿಯಾಗಳು ಇರುತ್ತವೆ. ಇವು ಜೀವಾಮೃತದಲ್ಲಿ ಅಸಂಖ್ಯಗೊಂಡು ಎಲ್ಲ ಬೆಳೆಗಳ ಪೊಟ್ಯಾಶ್ ಬೇಡಿಕೆಯನ್ನು ಸಮರ್ಥವಾಗಿ ಈಡೇರಿಸುತ್ತವೆ. (ಮುಂದುವರೆಯುವುದು)

(ಕೃಪೆ: ಧರ್ಮಭಾರತೀ)

## ಸಂಪಾದಕೀಯ

ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರ ಕಳೆದ ಸಂವತ್ಸರದ ಚಾತುರ್ಮಾಸ್ಯವು ಬೆಂಗಳೂರಿನಲ್ಲಿ ಜರುಗಿತ್ತು. ಆ ಸಂದರ್ಭದಲ್ಲಿ **"ಗೋವಿಗಾಗಿ ತಂತ್ರಜ್ಞರು"** (IT4Cow) ಎಂಬ ಸಂಘಟನೆಯನ್ನು ಸ್ವಾಮೀಜಿಯವರ ಆಶಯದಂತೆ ಹುಟ್ಟುಹಾಕಲಾಯಿತು. ಈ ಸಂಘಟನೆಯ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಅವುಗಳಲ್ಲಿ ಒಂದು ಈ **"ಗೋ ವಿಶ್ವ"** ಕಾಗದರಹಿತ ಪತ್ರಿಕೆ (e-paper). ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಹನ್ನೆರಡನೆಯ ಸಂಚಿಕೆ. ಪತ್ರಿಕೆ vishwagou.org/e-paper.htm ಜಾಲತಾಣದಲ್ಲಿ ಉಚಿತವಾಗಿ ಲಭ್ಯವಿದೆ. ಅಲ್ಲದೆ IT4COW@yahoogroups.comಗೆ ಸದಸ್ಯರಾಗುವ ಮೂಲಕ ನೇರವಾಗಿ ಪ್ರತಿತಿಂಗಳು ತಮ್ಮ ಮೈಲ್ ಬಾಕ್ಸ್‌ಗೇ ತರಿಸಿಕೊಳ್ಳಬಹುದು.

ಈ ರೀತಿಯ ಒಂದು ಪತ್ರಿಕೆ ಪ್ರಾರಂಭಿಸುತ್ತಿದ್ದೇವೆ, ಅದಕ್ಕೆ ಲೇಖನ ಬೇಕು ಎಂದು ಶತಾವಧಾನಿ ಡಾ। ರಾ. ಗಣೇಶರನ್ನು ಕೇಳಿಕೊಂಡಾಗ ಅವರು ಹೇಳಿದ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳುವುದು ತುಂಬ ಪ್ರಸ್ತುತ –"ಪತ್ರಿಕೆಯನ್ನು ಭಾವನಾತ್ಮಕವಾಗಿ ರೂಪಿಸಿ ಏನೂ ಪ್ರಯೋಜನವಿಲ್ಲ. ಗೋವಿನ ಜೊತೆ ಭಾವನಾತ್ಮಕವಾಗಿ ಇರುವವರಿಗೆ ಈ ಪತ್ರಿಕೆಯ ಅಗತ್ಯವಿಲ್ಲ. ಯಾವುದೇ ಚಳವಳಿ ಪರಿಣಾಮಕಾರಿಯಾಗಬೇಕಾದರೆ ಆರ್ಥಿಕವಾಗಿ ಅದು ಸಾಧ್ಯವಾಗಬೇಕು". ಹೌದು. ಗೋ ಆಧಾರಿತ ಜೀವನ ಆರ್ಥಿಕವಾಗಿ ಮಾತ್ರವಲ್ಲ, ಸಾಮಾಜಿಕವಾಗಿ, ವೈದ್ಯಕೀಯವಾಗಿಯೂ ಸಾಧ್ಯ. ಭಾರತೀಯರು ಅದೇ ರೀತಿ ಜೀವಿಸಿದ್ದರು. ಈ ಅಂಶಗಳನ್ನೇ ಮತ್ತೊಮ್ಮೆ ಜನರಿಗೆ ತಿಳಿಸಿ ಹೇಳುವ ಕೆಲಸ ಆಗಬೇಕಾಗಿದೆ. ಅದನ್ನೇ ಈ ಪತ್ರಿಕೆ ಮಾಡುತ್ತಿದೆ. ಭಾವನಾತ್ಮಕ ಅಂಶಗಳಿಗಿಂತ ವಿಷಯಾಧಾರಿತ ಲೇಖನಗಳನ್ನೇ ಇದು ತನಕ ನೀಡಲಾಗಿದೆ. ಈ ಲೇಖನಗಳು ಜನತೆಗೆ ತಲುಪಿ ಜನರು ಅದನ್ನು ಜೀವನದಲ್ಲಿ ಅಳವಡಿಸಿಕೊಂಡು ಸುಧಾರಣೆ ಕಂಡುಕೊಳ್ಳುತ್ತಿದ್ದಾರೆ ಎಂಬ ನಂಬಿಕೆಯಿಂದ ಈ ಪತ್ರಿಕೆಯನ್ನು ನಡೆಸುತ್ತಿದ್ದೇವೆ.

ಪತ್ರಿಕೆಯ ಉದ್ದೇಶಕ್ಕೆ ಸಹಮತ ಹೊಂದಿರುವ ಖ್ಯಾತ ವಿಜ್ಞಾನ ಲೇಖರಾದ ನಾಗೇಶ ಹೆಗಡೆ, ಕೊಳ್ಳೆಗಾಲ ಶರ್ಮ ಈ ಪತ್ರಿಕೆಗೆ ಲೇಖನ ನೀಡಿದ್ದಾರೆ, ನೀಡುತ್ತಿದ್ದಾರೆ. ಅವರಿಗೆ ಧನ್ಯವಾದಗಳು. ಈ ಪತ್ರಿಕೆಯ ಮೂಲಕವೇ ಕೆಲ ಹೊಸ ಲೇಖಕರು ಹುಟ್ಟಿಕೊಂಡಿದ್ದಾರೆ. ಅವರುಗಳೆಂದರೆ ಮಧುಕೇಶ ದೊಡ್ಡೇರಿ, ಶೋಭನಾ ಯರ್ಮುಂಜ, ಅನುಶ್ರೀ. ಇನ್ನೂ ಕೆಲವರು ಸದ್ಯದಲ್ಲೇ ಲೇಖನ ನೀಡುವವರಿದ್ದಾರೆ. ಮಧುಕೇಶ ದೊಡ್ಡೇರಿ ಪ್ರತಿ ತಿಂಗಳು ಒಂದು ಭಾರತೀಯ ತಳಿಯ ಗೋವಿನ ಬಗ್ಗೆ ಮಾಹಿತಿ ಸಂಗ್ರಹಿಸಿ ಲೇಖನ ತಯಾರಿಸಿ ನೀಡುತ್ತಿದ್ದಾರೆ. ಪತ್ರಿಕೆಗೆ ಲೇಖನ ನೀಡಿದ ಎಲ್ಲರಿಗೆ ಧನ್ಯವಾದಗಳು. ನಿಮ್ಮಿಂದ ಮುಂದೆಯೂ ಲೇಖನಗಳು ಬರುತ್ತಿರಲಿ.

ಪತ್ರಿಕೆಯ ಜಾಲತಾಣಕ್ಕೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ಹಾಗೆಯೆ ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಕೆಲವರು ಈಗಾಲೆ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ ಅವರಿಗೆ ಧನ್ಯವಾದಗಳು. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

**–ಡಾ। ಯು. ಬಿ. ಪವನಜ, ಸಂಪಾದಕ**

## ಸಹಸ್ಪಂದನ

ಇ–ಪತ್ರಿಕೆ ತಂಡಕ್ಕೆ ನನ್ನ ಅಭಿನಂದನೆ ಮತ್ತು ಧನ್ಯವಾದಗಳು. ಈ ಪತ್ರಿಕೆಯನ್ನು ನಡೆಸುವ ತಂಡದ ಶ್ರದ್ಧೆ ಮತ್ತು ಕಾರ್ಯತತ್ಪರತೆ ನಮಗೆಲ್ಲ ಆದರ್ಶನೀಯ. ಪತ್ರಿಕೆ ಉತ್ತಮ ಲೇಖನಗಳಿಂದ ಕೂಡಿ ಆಕರ್ಷಣೀಯವಾಗಿ ಮೂಡಿ ಬರುತ್ತಿದೆ.

–ಸತ್ಯಶಂಕರ ಮರಕಿಣಿ

ಗೋ ವಿಶ್ವ ಪತ್ರಿಕೆ ತುಂಬ ಅದ್ಭುತವಾಗಿ ಮೂಡಿ ಬಂದಿದೆ. ತಮಗೆ ಧನ್ಯವಾದಗಳು.

– ಕರೇ ಗೌಡ

ಗೋ ವಿಶ್ವ ಪತ್ರಿಕೆಯ ಸಂಚಿಕೆಗಳು ಚೆನ್ನಾಗಿವೆ. ತುಂಬ ಸ್ತುತ್ಯರ್ಹವಾದ ಕೆಲಸವನ್ನು ಮಾಡುತ್ತಿದ್ದೀರಿ. ಪತ್ರಿಕೆ ಕಳುಹಿಸಿದ್ದಕ್ಕೆ ಧನ್ಯವಾದಗಳು.

–ನೆತ್ರಕೆರೆ ಉದಯಶಂಕರ

ಪತ್ರಿಕೆಯ ಲೇಖನಗಳು ನಿಖರವಾದ ಮಾಹಿತಿಯನ್ನು ಹೊಂದಿವೆ.

– ಕೆರೆಕೊಪ್ಪ ರಮೇಶ